ಶ್ವೇತಪತ್ರದ ಮುಖಾಂತರ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದನ್ನು ಸರ್ಕಾರ ಈ ಸದನಕ್ಕೆ ಕೊಟ್ಟಿದೆ. ಅದಾದ ನಂತರ, to bring the discipline and to increase the revenue, ಏನೇನು ಮಾಡಬೇಕೆನ್ನುವುದಕ್ಕೆ ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆ 2001 ರಿಂದ 2005ರವರೆಗಿನ ಕಾರ್ಯಕ್ರಮಗಳನ್ನು ಸರ್ಕಾರ ನಮ್ಮ ಮುಂದಿಟ್ಟಿದೆ. ಕುಂಠಿತಗೊಂಡಿರುವ ಈ ಬೆಳವಣಿಗೆಯನ್ನು, ಬತ್ತಿಹೋಗುತ್ತಿರುವಂಥ ಸಂಪನ್ಮೂಲಗಳನ್ನು ಮತ್ತೆ ಪುನರುಜ್ಜೀವನಗೊಳಿಸಲು ಯಾರೂ ಕಂದಾಯ ಕಟ್ಟುವುದಿಲ್ಲ. ಈ ಎರಡೂ ಕೆಲಸಗಳನ್ನು ಮಾಡುವಂಥ ಸಂದರ್ಭದಲ್ಲಿ ನಾವು ನಿಮಗೆ ಸಂಪೂರ್ಣವಾದ ಬೆಂಬಲ ಕೊಡುತ್ತೇವೆ. ಕ್ರೋಢೀಕರಿಸಿದ ಸಂಪನ್ಮೂಲವನ್ನು ವಿನಿಯೋಗಿಸುವ ಸಂದರ್ಭದಲ್ಲಿ ಸ್ವಲ್ಪ ಕಟ್ಟುನಿಟ್ಟಿನ ತೀರ್ಮಾನ ತೆಗೆದುಕೊಂಡರೆ ಅದು ಪೂರ್ತಿಯಾಗಿ ಯೋಜನೆಗಳಿಗೆ ತಲುಪುವಂಥ ಕೆಲಸವಾಗುತ್ತದೆ. ಅದನ್ನು ತಾವು ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥಿಸಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ನಾಳಿನ ಕಲಾಪದಲ್ಲಿ ಪ್ರಶ್ನೋತ್ತರವಾಗಲಿ, ಶೂನ್ಯವೇಳೆಯಾಗಲಿ ಯಾವುದೂ ಇರುವುದಿಲ್ಲ. ಪೂರ್ತಿಯಾಗಿ ಬಜೆಟ್ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಡಲಾಗುವುದು.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 7 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ ಗುರುವಾರ 27ನೇ ಮಾರ್ಚ್ 2003ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

5. ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಸುಳ್ಯ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

1985 (2009) ಶ್ರೀ ಅಂಗಾರ ಎಸ್. (ಸುಳ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಹೆಲ್ತ್ ಸಿಸ್ಟಮ್ಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಯೋಜನೆಯಡಿಯಲ್ಲಿ ಸುಳ್ಯ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಎಷ್ಟು ಅನುದಾನ ಒದಗಿಸಲಾಗಿದೆ;

ಆ) ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಬೇಕಾಗಿತ್ತು? ಈವರೆಗೂ ಪೂರ್ಣಗೊಳಿಸದೇ ಇರಲು ಕಾರಣಗಳೇನು;

ಇ) ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಕಾಮಗಾರಿ ಈಗ ಯಾವ ಹಂತದಲ್ಲಿದೆ; ಈವರೆಗೂ ಮಾಡಿರುವ ವೆಚ್ಚವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕರ್ನಾಟಕ ಹೆಲ್ತ್ ಸಿಸ್ಟಮ್ಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಯೋಜನೆಯಡಿಯಲ್ಲಿ ಸುಳ್ಯ ಸಮುದಾಯ ಆರೋಗ್ಯ ಕೇಂದ್ರವನ್ನು ಒಟ್ಟು ರೂ. 106.71 ಲಕ್ಷಗಳ ವೆಚ್ಚದಲ್ಲಿ 50 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಆ) ಕಾಮಗಾರಿಗಳನ್ನು ದಿನಾಂಕ: 15-01-2000 ರಂದು ಪೂರ್ಣಗೊಳಿಸಬೇಕಾಗಿತ್ತು. ಆಸ್ಪತ್ರೆಯ ಹಳೇ ಕಟ್ಟಡದ ನವೀಕರಣ ಕಾರ್ಯವನ್ನು ಆಸ್ಪತ್ರೆಯ ಅಧಿಕಾರಿಗಳು ಕೊಠಡಿಗಳನ್ನು

ಖಾಲಿ ಮಾಡಿಕೊಟ್ಟಂತೆಯೇ ಹಾಗೂ ಆಸ್ಪತ್ರೆಯ ದೈನಂದಿನ ಕಾರ್ಯಕ್ರಮಗಳಿಗೆ ತೊಂದರೆಯಾಗದಂತೆ ಮಾಡಬೇಕಾಗಿದ್ದುದರಿಂದ ಈ ಆಸ್ಪತ್ರೆಯ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಮುಗಿಸಲಾಗಲಿಲ್ಲ.

ಇ) ಈ ಆಸ್ಪತ್ರೆಯ ಕಾಮಗಾರಿಗಳನ್ನು ದಿನಾಂಕ: 12-09-2000 ದಂದು ಪೂರ್ಣಗೊಳಿಸಿ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಈ ಬಗ್ಗೆ ಆಗಿರುವ ವೆಚ್ಚವು ರೂ. 106.71 ಲಕ್ಷಗಳು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ

1986(2443) ಶ್ರೀ ಎಂ.ಜಿ. ಅಪ್ಪಾಜಿ(ಭದ್ರಾವತಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕ್ಲರ್ಕ್ ಕಂ ಟೈಪಿಸ್ಟ್ ವೃಂದದವರಿಗೆ ಪೂರ್ವಾನ್ವಯವಾಗಿ ಬಡ್ತಿಗೆ ಅವಕಾಶ ಕಲ್ಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ನಿಜವೇ; ಹಾಗಿದ್ದಲ್ಲಿ ಯಾವಾಗ ಈ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು;

ಆ) ಈ ಪ್ರಸ್ತಾವನೆಯಲ್ಲಿ ದ್ವಿತೀಯ ದರ್ಜೆ ಸಹಾಯಕ ವೃಂದದ ಬಡ್ತಿಗೆ ಮೀಸಲಾಗಿದ್ದ ಹುದ್ದೆಗಳಲ್ಲಿ ಶೇಕಡಾ 5 ಹುದ್ದೆಗಳನ್ನು ಪೂರ್ವಾನ್ವಯವಾಗಿ ಕ್ಲರ್ಕ್ ಕಂ ಟೈಪಿಸ್ಟ್ ವೃಂದದವರಿಗೆ ನೀಡಲು ಇಲಾಖೆ ಶಿಫಾರಸ್ಸು ಮಾಡಿರುವುದು ನಿಜವೇ; ಹಾಗಿದ್ದಲ್ಲಿ ಈ ಶಿಫಾರಸ್ಸಿನ ಪ್ರಮುಖ ಅಂಶಗಳೇನು;

ಇ) ಈ ತಿದ್ದುಪಡಿ ಆದೇಶವನ್ನು ಯಾವಾಗ ಹೊರಡಿಸಲಾಗಿದೆ; ಈ ಆದೇಶವನ್ನು ಪೂರ್ವಾನ್ವಯವಾಗಿ ಜಾರಿಗೊಳಿಸಿರುವುದು ನಿಜವೇ;

ಈ) ಒಂದು ವೃಂದದ ನೌಕರರಿಗೆ ಮೀಸಲಾಗಿದ್ದ ಹುದ್ದೆಗಳನ್ನು ಈ ನೌಕರರಿಗೆ ಅನ್ಯಾಯವಾಗುತ್ತಿದ್ದರೂ ಇನ್ನೊಂದು ವೃಂದದ ನೌಕರರಿಗೆ ಪೂರ್ವಾನ್ವಯವಾಗಿ ನೀಡಲು ಯಾವ ನಿಯಮಗಳಲ್ಲಿ ಅವಕಾಶವಿದೆ;

ಉ) ನಿಯಮಕ್ಕೆ ವಿರುದ್ಧವಾಗಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಹೌದು 1984-1985ರಲ್ಲಿ ಪ್ರಸ್ತಾವನೆ ಸಲ್ಲಿಸಲಾಯಿತು.

ಆ) ಹೌದು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಪ್ರಥಮ ದರ್ಜೆ ಸಹಾಯಕರ ಒಟ್ಟು ಹುದ್ದೆಗಳಲ್ಲಿ ಶೇಕಡಾ 50 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಮತ್ತು ಶೇಕಡಾ 50 ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಬಡ್ತಿ ಮೂಲಕ ತುಂಬಲು ಅವಕಾಶವಿತ್ತು. ಇಲಾಖೆಯ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರಿಗೆ ಬಡ್ತಿ ಅವಕಾಶವಿಲ್ಲದಿದ್ದರಿಂದ, ಶೇಕಡಾ 50 ಹುದ್ದೆಗಳಲ್ಲಿ ಶೇಕಡಾ 45 ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರಿಗೂ ಮತ್ತು ಶೇಕಡಾ 5 ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರು ಸಹಿತ ಬೆರಳಚ್ಚುಗಾರರಿಗೂ ಬಡ್ತಿ ಅವಕಾಶ ಕಲ್ಪಿಸುವುದಾಗಿದೆ.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/111/ಡಿಜಿಎ/1984, ದಿ: 26/03/1990 ರಂತೆ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶವು ದಿನಾಂಕ: 06/02/1997 ರಿಂದಲೇ ಜಾರಿಯಲ್ಲಿದೆ.